ಚರ್ಚೆಗೆ ಅವಕಾಶ ಕೊಡುತ್ತೇನೆ. ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಿ, ಯಾರೂ ಬೇಡವೆಂದು ಹೇಳುವುದಿಲ್ಲ.

ಶ್ರೀ ಸುರೇಶ್‌ಗೌಡ: ರಿಪೇರಿ ಮಾಡುವ ಬಗ್ಗೆ ಕಾಲಮಿತಿ ಹೇಳಿದರೆ ಸಾಕು.

ಅಧ್ಯಕ್ಷರು: ಬೇರೆ ರೂಪದಲ್ಲಿ ನೋಟೀಸ್ ಕೊಡಿ, ಅವಕಾಶ ಕೊಡುತ್ತೇನೆ. ಕರಡಿ ಸಂಗಣ್ಣನವರೆ ಪ್ರಶ್ನೆ ಕೇಳಿ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಯಾವುದೂ ದಾಖಲೆಗೆ ಹೋಗಬಾರದು. ಸುರೇಶ್‌ಗೌಡರೆ, please ಕುಳಿತುಕೊಳ್ಳಿ. ರಾಜುರವರೆ, ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಕರಡಿ ಸಂಗಣ್ಣನವರೆ, ಪ್ರಶ್ನೆ ಕೇಳಿ.

ಶ್ರೀ ಕೆ. ರಾಜು: ಮಂತ್ರಿಯವರು ಕೇಳಿದ್ದಾರೆ, ನಾನು ಪಟ್ಟಿ ಕೊಡುತ್ತಿದ್ದೇನೆ.

ಅಧ್ಯಕ್ಷರು: ನಾನು ಕರಡಿ ಸಂಗಣ್ಣನವರನ್ನು ಕರೆದಿದ್ದೇನೆ. Please ಕುಳಿತುಕೊಳ್ಳಿ. ಅವಕಾಶವಿಲ್ಲ. ನೀವು 3-4 ಸಲ ಕೇಳಿದ್ದೀರಿ.

ಶ್ರೀ ಕೆ. ರಾಜು: ಪಟ್ಟಿ ಕೊಡುವುದಕ್ಕೆ ಅನುಮತಿ ಕೊಡಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ಬೇರೆ ರೂಪದಲ್ಲಿ ತಂದರೆ ಬೇಕಾದರೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ. ನೀವು ಕೊಡಿ.

ಬಿ.ಸಿ.ಎಂ. ವಿದ್ಯಾರ್ಥಿ ನಿಲಯದ ಬಗ್ಗೆ

51 (260) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಬಿ.ಸಿ.ಎಂ. ವಸತಿ ನಿಲಯ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದಲ್ಲಿ, ಪ್ರತಿ ತಾಲ್ಲೂಕಿಗೆ ಎಷ್ಟು ವಸತಿ ನಿಲಯಗಳನ್ನು ಮಂಜೂರು ಮಾಡಲಾಗುವುದು ; (ವಿವರಗಳನ್ನು ನೀಡುವುದು)

ಇ) ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಸತಿ ನಿಲಯಗಳ ಕೊರತೆಯಿರುವುದರಿಂದ ಸ್ಥಳೀಯ ಬಡಮಕ್ಕಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಕೊರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಈ) ಕೊಪ್ಪಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಬೆಟಗೇರಿ, ಬಂಡಿ ಹರ್ಲಾಪುರ, ಹ್ಯಾಟಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ವಸತಿನಿಲಯಗಳ ಕೊರತೆಯನ್ನು ನಿವಾರಿಸಲು ಪ್ರಸ್ತಾವನೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ವಸತಿನಿಲಯಗಳ ಕೊರತೆಗಳನ್ನು ನಿವಾರಿಸಲು ಕೈಗೊಂಡ ಕ್ರಮಗಳೇನು ; ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಲಾಗುವುದೇ ?

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಸಚಿವರು):

ಅ) ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಹೊಸದಾಗಿ ಪ್ರಾರಂಭಿಸುವುದಕ್ಕಾಗಿ ಬೇಡಿಕೆಗಳು ಬಂದಿವೆ.

ಆ) ಮತ್ತು ಇ) 2011–12ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನವನ್ನು ಮತ್ತು ಆಯಾ ತಾಲ್ಲೂಕುಗಳಲ್ಲಿ ವಸತಿ ನಿಲಯಗಳಿಗೆ ಇರುವ ಬೇಡಿಕೆಗಳನ್ನು ಅನುಸರಿಸಿ ಹಾಸ್ಟೆಲ್‌ಗಳ ಕೊರತೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಹೌದು.

ಈ) ರಾಜ್ಯದ ಒಟ್ಟಾರೆ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು 2011–12ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನವನ್ನು ಅನುಸರಿಸಿ ಹಂತ ಹಂತವಾಗಿ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಉತ್ತರ ಕೊಟ್ಟಿದ್ದಾರೆ. ನಮ್ಮ ಮೂಲ ಪ್ರಶ್ನೆ ಏನೆಂದರೆ ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಬಿ.ಸಿ.ಎಂ. ವಸತಿನಿಲಯ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳನ್ನು ಸರ್ಕಾರ ಮಂಜೂರು ಮಾಡುವ ಪ್ರಸ್ತಾವನೆ ಇದೆಯೇ ಎಂದು ಕೇಳಿದ್ದೆ. ಅದಕ್ಕೆ ವಿದ್ಯಾರ್ಥಿ ನಿಲಯಗಳನ್ನು ಹೊಸದಾಗಿ ಪ್ರಾರಂಭಿಸುವುದಕ್ಕಾಗಿ ಬೇಡಿಕೆ ಬಂದಿವೆ ಎಂದು ಉತ್ತರ ಕೊಟ್ಟಿದ್ದಾರೆ. Specific ಆಗಿ ಈ ವರ್ಷ policy decision ತೆಗೆದುಕೊಂಡು ಇಂತಿಷ್ಟು ಮೆಟ್ರಿಕ್ ನಂತರ ಮತ್ತು ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳನ್ನು ಮಂಜೂರು

ಮಾಡುತ್ತೇವೆಂಬ ಸ್ಪಷ್ಟನೆಯನ್ನು ಮಾನ್ಯ ಮಂತ್ರಿಯವರು ತಮ್ಮ ಉತ್ತರದಲ್ಲಿ ಕೊಟ್ಟಿಲ್ಲ. ಎರಡನೆಯದಾಗಿ, ನನ್ನ ಬೇಡಿಕೆ ಏನೆಂದರೆ, ಬಡ ಮಕ್ಕಳು ಓದು ನಿಲ್ಲಿಸುವ ವಾತಾವರಣ ಇದೆ. ಹೋಬಳಿ ಮಟ್ಟದಲ್ಲಿ ಕೂಡ ವಸತಿ ನಿಲಯಗಳಿಲ್ಲ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಳ್ಳಿಗಾಡಿನಲ್ಲಿರುವ ಮಕ್ಕಳಲ್ಲಿ ತಾವು ಓದಬೇಕೆನ್ನುವ awareness ಬಂದಿದೆ. Specific ಆಗಿ ಇಂಥ ಗ್ರಾಮಗಳಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಸ್ಟೆಲ್‌ಗಳ ಅವಶ್ಯಕತೆ ಇದ್ದು ಅವುಗಳನ್ನು ಮಂಜೂರಾತಿ ಮಾಡಿಕೊಡಬೇಕೆಂದು ವಿನಂತಿಸಿದ್ದೇನೆ. ನನ್ನ ಪ್ರಶ್ನೆಗೆ ಮಂತ್ರಿಯವರು ಏನು ಉತ್ತರ ಕೊಡುತ್ತಾರೆಂದು ನಿರೀಕ್ಷಣೆ ಮಾಡುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ: ವಿಶೇಷವಾಗಿ ಕರಡಿ ಸಂಗಣ್ಣನವರು ಅವರ ಕ್ಷೇತ್ರದಲ್ಲಿ BCM hostel ಬೇಡಿಕೆ ಇದೆ ಎಂದು ಹೇಳಿದ್ದಾರೆ. ಅವರ ಜಿಲ್ಲೆಯಲ್ಲಿ ಸುಮಾರು 11 BCM hostels ಅವಶ್ಯಕತೆ ಇದೆ ಎನ್ನುವ ಪಟ್ಟಿ ಕೊಟ್ಟಿದ್ದಾರೆ. ಅವರ ಪ್ರಶ್ನೆಯಲ್ಲಿ ವಿಶೇಷವಾಗಿ 4 hostels ಬೇಕೆಂದು ಕೇಳಿದ್ದಾರೆ. ಅದು ಬೆಟಗೇರಿ, ಬಂಡಿ ಹರಳಾಪುರ, ಹ್ಯಾಟಿ ಮತ್ತು ಇನ್ನಿತರ ಕಡೆಗಳಲ್ಲಿ hostels ಬೇಕೆಂದು ಕೇಳಿದ್ದಾರೆ. ಇಡೀ ರಾಜ್ಯದಲ್ಲಿ 252 BCM hostelsನ ಬೇಡಿಕೆ ಇದೆ. ಪರಿಶಿಷ್ಟ ಜಾತಿ: ವರ್ಗದ 1348 hostels ಅವಶ್ಯಕತೆ ಇದೆ ಎಂದು ಬಂದಿದೆ. ಅದರ ಹಿಂದಿನ ವರ್ಷ ಇನ್ನೂ ಹೆಚ್ಚು hostels ತೆರೆಯಬೇಕೆಂದಿದ್ದೆವು. ಆದರೆ, ಒಂದೇ ಒಂದು hostel ಅನ್ನೂ ಸಹ ತೆರೆದಿಲ್ಲ. 2011–12ರ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದಕ್ಕಾಗಿ ಹೆಚ್ಚು ಹಣವನ್ನು ಒದಗಿಸಿರುವುದರಿಂದ ಈ ಬಾರಿ hostels ಒದಗಿಸುತ್ತೇವೆ. 548 ಮೊರಾರ್ಜಿದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳನ್ನು ಇಡೀ ರಾಜ್ಯದಲ್ಲಿ ಪ್ರಾರಂಭ ಮಾಡಿದ್ದೇವೆ. ಈ ಸಲ ಕೆಲವು ಬೇಡಿಕೆಗಳು ಬಂದಿವೆ. ಅದನ್ನು ಪರಿಗಣಿಸಿ ಹಣದ ಲಭ್ಯತೆ ಆಧರಿಸಿ ಮಂಜೂರಾತಿ ಮಾಡಿಸಿ ಕೊಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಮಂತ್ರಿಯವರು specific ಆಗಿ ಹೇಳಿಲ್ಲ. Demand ಇದೆ.

ಅಧ್ಯಕ್ಷರು: ಆದ್ಯತೆ ಮೇಲೆ ಮಾಡಿಸಿಕೊಡುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ನನ್ನ ಕ್ಷೇತ್ರಕ್ಕೆ ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವದ ಎಷ್ಟು hostels ಅನ್ನು ಆದ್ಯತೆ ಮೇಲೆ ಎಷ್ಟು ಕೊಡುತ್ತಾರೆಂದು ಹೇಳಬೇಕು.

ಶ್ರೀ ಎ. ನಾರಾಯಣಸ್ವಾಮಿ: ಮೆಟ್ರಿಕ್ ಪೂರ್ವ ಎನ್ನುವುದಕ್ಕಿಂತ ಮೆಟ್ರಿಕ್‌ನಂತರದ hostelsಗೆ ಬಹಳಷ್ಟು demand ಇದೆ. ಖಂಡಿತವಾಗಲೂ ಅವರ ಬೇಡಿಕೆಯನ್ನು ಪೂರೈಸಿಕೊಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಬಂಡಿ ಹರಳಾಪುರ, ಹಳವಂಡಿ, ಹಿತ್ನಾಳ್ ಗಳಲ್ಲಿ ಬಹಳ ಅವಶ್ಯಕತೆ ಇದೆ. ಅವು degree collegeಗಳು ಇರುವ ಸ್ಥಳಗಳು. ಮಂತ್ರಿಯವರು ಅದನ್ನು ಪರಿಗಣಿಸುತ್ತಾರೆಂದು ನಾನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ: ಕರಡಿ ಸಂಗಣ್ಣನವರೆ, ತಾವು ಬನ್ನಿ. ತಾವು 4 hostels ಕೇಳಿದ್ದೀರಿ. ಅವಶ್ಯಕತೆ ಇದ್ದರೆ ನಾನು ಮಂಜೂರಾತಿ ಮಾಡಿಸಿಕೊಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: Thank you.

ಜಮಖಂಡಿ ತಾಲ್ಲೂಕಿನ ಸಾವಳಗಿ ಭಾಗಕ್ಕೆ 220 ಕೆ.ವಿ. ಸ್ಟೇಶನ್ ಮಂಜೂರಾತಿ

52 (98) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ): ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಪಂಪ್‌ಸೆಟ್ಟುಗಳು ಎಷ್ಟು ;

ಆ) ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿಯ ಎಡಭಾಗದ ಗ್ರಾಮಗಳಿಗೆ ಯಾವ ವಿದ್ಯುತ್ 220 ಕೆ.ವಿ. ಸ್ಟೇಷನ್‌ನಿಂದ ಬರುತ್ತಿದೆ ; ಅದರ ಅಂತರವೆಷ್ಟು;

ಇ) ಸಾವಳಗಿ ಭಾಗದ ಕೆರೆ ತುಂಬುವ ಯೋಜನೆ ಹಾಗೂ ಗುಂಪು ಗ್ರಾಮಗಳ ಕುಡಿಯುವ ನೀರಿನ ಯೋಜನೆಗೆ ಬೇಕಾಗುವಷ್ಟು ಗುಣಮಟ್ಟದ ವಿದ್ಯುತ್ ಕೊಡಬೇಕಾದಲ್ಲಿ ಹೊಸ 220 ಕೆ.ವಿ. ಸ್ಟೇಷನ್ ಬೇಕಲ್ಲವೆ ;

ಈ) ಪ್ರಸಕ್ತ ಸಾಲಿನಲ್ಲಿ ಮಂಜೂರಿ ನೀಡಬಹುದೆ ?

ಕು॥ ಶೋಭಾ ಕರಂದ್ಲಾಜೆ (ಇಂಧನ ಸಚಿವರು):

ಅ) ಜನವರಿ–2011ರ ಅಂತ್ಯದಲ್ಲಿದ್ದಂತೆ ಜಮಖಂಡಿ ತಾಲ್ಲೂಕಿನಲ್ಲಿರುವ ನೀರಾವರಿ ಪಂಪುಸೆಟ್ಟುಗಳ ಒಟ್ಟು ಸಂಖ್ಯೆ 22,818.

ಆ) ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿಯ ಎಡಭಾಗದ ಗ್ರಾಮಗಳಿಗೆ ಸಾವಳಗಿಯ 110 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ.

ಸಾವಳಗಿಯಲ್ಲಿರುವ 110 ಕೆ.ವಿ. ವಿದ್ಯುತ್ ಉಪ ಕೇಂದ್ರಕ್ಕೆ ಈ ಮೊದಲು ಸುಮಾರು 65 ಕಿ.ಮೀ. ದೂರದಲ್ಲಿರುವ ಬಸವನ ಬಾಗೇವಾಡಿಯ 220 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿತ್ತು. ಪ್ರಸ್ತುತ, ದಿನಾಂಕ 15.12.2008ರಂದು ಕಾರ್ಯಾರಂಭಗೊಂಡು